ಕರ್ನಾಟಕ ವಿಶ್ವವಿದ್ಯಾಲಯ
KARNATAK UNIVERSITY
KARNATAKA COLLEGE
Karnatak University Kaveri Ladies Hostel, Dharwad-01
ಕಾವೇರಿ ವಸತಿ ನಿಲಯ, ಧಾರವಾಡ.

ಕ್ರ. ಸಂ :-ಕಾ.ವ.ನಿ/2024-25/70

ದಿನಾಂಕ :- 9-9-2024

# ಸುತ್ತೋಲೆ

1) ಕಾವೇರಿ ಬ್ಲಾಕ – I ಹಾಗೂ II ವಸತಿ ನಿಲಯಗಳಿಗೆ ಒಂದನೇಯ ಮೆರಿಟ್ ಲಿಸ್ಟನಲ್ಲಿ ಇರುವ ಪ್ರಥಮ ಪದವಿ ವಿದ್ಯಾರ್ಥಿಗಳು ಹಾಸ್ಟೇಲ್ ಪ್ರವೇಶಾತಿ ಪಡೆಯುವ ಕೊನೆಯ ದಿನಾಂಕ 13/09/2024 ಆಗಿದೆ.

2) ವಿದ್ಯಾರ್ಥಿಗಳು ಕಡ್ಡಾಯವಾಗಿ ಹಾಸ್ಟೇಲ್ ಪ್ರವೇಶಾತಿ ಪಡೆಯುವಾಗ **ಜಿಲ್ಲಾ ಆರೋಗ್ಯ ಅಧಿಕಾರಿಗಳಿಂದ** ಪಡೆದ ಸಧೃಡತೆ ಪ್ರಮಾಣ ಪತ್ರ ಸಲ್ಲಿಸಬೇಕು.

3) ರೂ. 100/- ಗಳ ಬಾಂಡ ಪೇಪರ್‌ನಲ್ಲಿ **First Party** ಎಂದು ಇದ್ದಲ್ಲಿ ತಮ್ಮ ಹೆಸರನ್ನು ನಮೂದಿಸಬೇಕು ಮತ್ತು **Second Party** ಎಂದು ಇದ್ದಲ್ಲಿ **DSW, Karnataka University, Dharwad** ನಮೂದಿಸಬೇಕು ಜೊತೆಗೆ ಈ ಕೆಳಕಂಡ ಅಂಶಗಳನ್ನು ಸಹ ನಮೂದಿಸಿ ವಿದ್ಯಾರ್ಥಿನಿ ಸಹಿ, ಪಾಲಕರ ಸಹಿಯೊಂದಿಗೆ ಬಾಂಡ ಪೇಪರನ್ನು ಹಾಸ್ಟೇಲ್ ಕಚೇರಿಯಲ್ಲಿ ಸಲ್ಲಿಸಬೇಕು.

S. Ah 9/9/24
ಕ್ಷೇಮಪಾಲಕರು
ಕಾವೇರಿ ವಿದ್ಯಾರ್ಥಿನಿಯರ ವಸತಿ ನಿಲಯ
ಬ್ಲಾಕ್-1. ಧಾರವಾಡ

Jayalakshmi K
ಕ್ಷೇಮಪಾಲಕರು
ಕಾವೇರಿ ವಿದ್ಯಾರ್ಥಿನಿಯರ ವಸತಿ ನಿಲಯ
(ಬ್ಲಾಕ್-2) ಧಾರವಾಡ.

# ಬಾಂಡ ಪೇಪರ್‌ನಲ್ಲಿ ನಮೂದಿಸಬೇಕಾದ ಅಂಶಗಳು

ಇಂದ:
ಹೆಸರು :
ವರ್ಗ :
ಕೋಣೆ ನಂ. :

ದಿನಾಂಕ

ಇವರಿಗೆ,
ನಿಲಯಪಾಲಕರು

______________________

ಕ.ವಿ.ವಿ. ಧಾರವಾಡ

ಮಾನ್ಯರೆ,

ನಾನು ಈ ಕೆಳಗೆ ಸಹಿ ಮಾಡಿದ ಶ್ರೀ______________________ ತಮ್ಮ ವಿದ್ಯಾರ್ಥಿನಿಲಯದಲ್ಲಿ ಪ್ರವೇಶ ಪಡೆದಿದ್ದು ಈ ಕೆಳಗೆ ನಮೂದಿಸಿದ ಸಾಮಗ್ರಿಗಳನ್ನು ನನ್ನ ವಶಕ್ಕೆ ತೆಗೆದುಕೊಂಡಿರುತ್ತೇನೆ.

1. ಕಟ್ಟಿಗೆಯ ಟೇಬಲ್
2. ಕಟ್ಟಿಗೆಯ ಕುರ್ಚಿ
3. ಕಬ್ಬಿಣದ ಕಾಟ್ (ಪಲ್ಲಂಗ)
4. ಕಟ್ಟಿಗೆಯ / ಕಬ್ಬಿಣದ ರ್‍ಯಾಕ್

ನಾನು ಪ್ರಮಾಣೀಕರಿಸುವದೇನೆಂದರೆ ಮೇಲೆ ಕಾಣಿಸಿದ ಎಲ್ಲ ವಸ್ತುಗಳನ್ನು ಕಾಳಜಿ ಪೂರ್ವಕವಾಗಿ ಉಪಯೋಗಿಸಿಕೊಳ್ಳುತ್ತೇನೆ. ನಾನು ವಿದ್ಯಾರ್ಥಿನಿಲಯವನ್ನು ಬಿಟ್ಟು ಹೋಗುವಾಗ ಒಂದು ವೇಳೆ ಏನಾದರೂ ಮೇಲೆ ಕಾಣಿಸಿದ ವಸ್ತುಗಳಲ್ಲಿ ಯಾವುದಾದರೂ ಮುರಿದರೆ ಅಥವಾ ಹಾನಿಯಾದಲ್ಲಿ ಅದಕ್ಕೆ ತಗಲುವ ವೆಚ್ಚವನ್ನು ನಾನೇ ಕೊಡುತ್ತೇನೆ.

1) ನಾನು ಯಾವುದೇ ರ್‍ಯಾಗಿಂಗ್ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವುದು ಕಂಡು ಬಂದರೆ ತಾವು ತಕ್ಷಣವಾಗಿ ಜಾರಿಗೆ ಬರುವಂತೆ ಒಂದು ಶೈಕ್ಷಣಿಕ ವರ್ಷಕ್ಕೆ ನನ್ನನ್ನು ಅಮಾನತುಗೊಳಿಸಿ ಕಾನೂನಿನ ಪ್ರಕಾರ ಕ್ರಮ ಜರುಗಿಸಲು ನನ್ನ ಒಪ್ಪಿಗೆ ಇರುತ್ತದೆ ಮತ್ತು ನನಗೆ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಯಾವುದೇ ವಸತಿನಿಲಯದಲ್ಲಿ ಪ್ರವೇಶ ಪಡೆಯಲು ನಿರ್ಭಂಧನಾಗಲು ನನ್ನ ಒಪ್ಪಿಗೆ ಇರುತ್ತದೆ.
2) ನಾನು ಸಂಶೋಧನಾ ವಿದ್ಯಾರ್ಥಿಯಾಗಿದಲ್ಲಿ ಕವಿವಿಯ ವ್ಯಾಪ್ತಿಯಲ್ಲಿ ಸಂಶೋಧನಾ ವಸತಿನಿಲಯಗಳಲ್ಲಿ ನನ್ನ ಸಂಶೋಧನಾ ಅವಧಿ ಕನಿಷ್ಠ ಮೂರು ವರ್ಷ ಗರಿಷ್ಠ ಐದು ವರ್ಷಗಳವರೆಗೆ ಮಾತ್ರ ವಸತಿನಿಲಯಲ್ಲಿ ವಾಸವಿರುತ್ತೇನೆ. ನನ್ನ ಸಂಶೋಧನಾ ಗರಿಷ್ಠ ಅವಧಿಯು ಮುಕ್ತಾಯದ ನಂತರವೂ ವಾಸವಿದ್ದಲ್ಲಿ ನನ್ನ ಮೇಲೆ ವಿಶ್ವವಿದ್ಯಾಲಯದ ನಿಯಮಾನುಸಾರ ಕ್ರಮ ಜರುಗಿಸಲು ನಾನು ಬದ್ಧನಾಗಿರುತ್ತೇನೆ.
3) ನಾನು ವಿದ್ಯಾರ್ಥಿನಿಲಯದ ನೀರು, ವಿದ್ಯುತ್‌ನ್ನು ಮಿತವ್ಯಯದಿಂದ ಉಪಯೋಗಿಸುತ್ತೇನೆ.
4) ನಾನು ವಿದ್ಯಾರ್ಥಿನಿಲಯದ ಸಿಬ್ಬಂದಿ ವರ್ಗದವರ ಸಂಗಡ ವಿನಯಪೂರ್ವಕವಾಗಿ ಹಾಗೂ ಸಹ ವಿದ್ಯಾರ್ಥಿಗಳೊಂದಿಗೆ ಸಹಕಾರದಿಂದ ವರ್ತಿಸುತ್ತೇನೆ.
5) ನಾನು ವಿದ್ಯಾರ್ಥಿನಿಲಯದ ಕೋಣೆಗಳಲ್ಲಿ ರೇಡಿಯೋ, ಟೇಪ ರಿಕಾರ್ಡ್‌ರ್, ಇಸ್ತ್ರೀ, ವಿದ್ಯುತ್‌ಒಲೆ, ಗ್ಯಾಸ್‌ಒಲೆ ಇತ್ಯಾದಿಗಳನ್ನು ಉಪಯೋಗಿಸುವುದಿಲ್ಲ. ಒಂದು ವೇಳೆ ಉಪಯೋಗಿಸಿದಲ್ಲಿ ನಿಯಮಾನುಸಾರ ನನ್ನ ಪ್ರವೇಶವನ್ನು ರದ್ದು ಪಡಿಸಬಹುದು.
6) ನಾನು ವಿದ್ಯಾರ್ಥಿನಿಯಲದ ಕೋಣೆಗಳಲ್ಲಿ ಅಡಿಗೆ ಮಾಡಿಕೊಳ್ಳುವುದಿಲ್ಲ
7) ವಿದ್ಯಾರ್ಥಿ/ವಿದ್ಯಾರ್ಥಿನಿಯರು ವಸತಿನಿಲಯಗಳಿಗೆ ಪ್ರವೇಶ ಪಡೆದ ದಿನಾಂಕದಿಂದಲೇ ಊಟ ಮತ್ತು ಉಪಹಾರದ ಮೊತ್ತವನ್ನು ಗುತ್ತಿಗೆದಾರರಿಗೆ ಕಡ್ಡಾಯವಾಗಿ ಪಾವತಿಸುತ್ತೇನೆ.
8) ನಾನು ವಸತಿನಿಲಯದಲ್ಲಿ ಇರುವ ಹಾಜರಾತಿ ರಜಿಸ್ಟರ್‌ನಲ್ಲಿ ನಿಯಮಾನುಸಾರ ಹಾಜರಾತಿ ವರದಿಯನ್ನು ನೀಡುತ್ತೇನೆ.
9) ವಸತಿನಿಲಯಾರ್ಥಿಗಳು ತಿಂಗಳಿಗೆ ಮೂರು (3) ದಿನ ಅಥವಾ ಮೂರು ದಿನಕ್ಕಿಂತ ಮೇಲ್ಪಟ್ಟು ತುರ್ತು ಸಂದರ್ಭಗಳಲ್ಲಿ ಊರಿಗೆ ತೆರಳುವುದಾದಲ್ಲಿ ವಿಭಾಗದ ಅಧ್ಯಕ್ಷರು, ನಿಲಯಪಾಲಕರ ಅಥವಾ ಸದರಿ ವಿಭಾಗದವರಿಂದ ಒಪ್ಪಿಗೆ ಪಡೆದು ಸದರ ಪತ್ರವನ್ನು ಎರಡು ದಿನಗಳ ಮೊದಲು ಮೆಸ್ ಗುತ್ತಿಗೆದಾರರಿಗೆ ನೀಡುತ್ತೇನೆ.
10) ನಾನು ವಸತಿನಿಲಯಗಳಲ್ಲಿ ಪ್ರವೇಶ ಪಡೆದ ನಂತರ ಪೂರ್ವಾನುಮತಿ ಇಲ್ಲದೇ ಬೇರೆ ಯಾವುದೇ ಅತಿಥಿಗಳು ಇರುವುದು ಕಂಡುಬಂದಲ್ಲಿ ನನ್ನ ಪ್ರವೇಶವನ್ನು ರದ್ದುಪಡಿಸಬಹುದು.
11) ನಾನು ಕಡ್ಡಾಯವಾಗಿ ವಸತಿನಿಯಲಗಳಲ್ಲಿ ಊಟ/ಉಪಹಾರವನ್ನು ಸೇವಿಸುತ್ತೇನೆ. ಇಲ್ಲವಾದಲ್ಲಿ, ನನ್ನ ಪ್ರವೇಶವನ್ನು ರದ್ದುಪಡಿಸಬಹುದು.
12) ಒಮ್ಮೆ ಪ್ರವೇಶ ಪಡೆದ ಕೋಣೆಯನ್ನು ನಿಲಯಪಾಲಕರ ಅನುಮತಿ ಇಲ್ಲದೆ ಬದಲಾಯಿಸುವದಿಲ್ಲ. ಒಂದು ವೇಳೆ ಅನಧಿಕೃತವಾಗಿ ಕೋಣೆ ಬದಲಾಯಿಸಿಕೊಂಡದ್ದು ಕಂಡು ಬಂದರೆ ದಂಡ ಹಾಕಬಹುದು.
13) ನಾನು ವಿದ್ಯಾರ್ಥಿನಿಲಯದಲ್ಲಿ ಮದ್ಯಪಾನ /ಧೂಮ್ರಪಾನ ಹಾಗೂ ದುಶ್ಚಟಗಳಿಗೆ ಆಸ್ಪದ ನೀಡುವದಿಲ್ಲ. ಹಾಗೇನಾದರೂ ಕಂಡುಬಂದಲ್ಲಿ ನನ್ನ ಪ್ರವೇಶ ರದ್ದುಪಡಿಸಬಹುದು.

14) ನನ್ನ ನಡುವಳಿಕೆಗಳಿಂದ ಯಾವ ರೀತಿಯಿಂದಾದರೂ ವಸತಿನಿಲಯದ ಶಾಂತಿ ಭಂಗವಾಗುತ್ತಿದ್ದರೆ, ನನ್ನ ವಸತಿನಿಲಯದ ಸಹ ವಿದ್ಯಾರ್ಥಿಗಳಿಗೆ ಯಾವ ರೀತಿಯಿಂದಾದರೂ ತೊಂದರೆ, ಅನಾನುಕೂಲತೆಗಳಾಗುತ್ತಿದ್ದರೆ ಹಾಗೂ ನನ್ನ ನಡುವಳಿಕೆಗಳಿಂದ ವಿದ್ಯಾರ್ಥಿನಿಲಯದ ನಿಲಯಪಾಲಕರಿಗಾಗಲಿ, ಸಿಬ್ಬಂದಿ ವರ್ಗಕ್ಕಾಗಲಿ ತೊಂದರೆಯಾಗುತ್ತಿದ್ದರೆ ಮತ್ತು ಯಾವ ರೀತಿಯಿಂದಾದರೂ ವಸತಿನಿಲಯದ ನಿಯಮಗಳನ್ನು ಉಲ್ಲಂಘಿಸಿರುವುದು ಕಂಡು ಬಂದರೆ ನನ್ನ ಠೇವಣಿ ಹಣ ಹಿಂದುರುಗಿಸದೇ ನನ್ನ ಪ್ರವೇಶವನ್ನು ರದ್ದುಪಡಿಸಬಹುದು.

15) ಯು.ಜಿ / ಪಿ.ಜಿ ಕೋರ್ಸಿನ ಮೊದಲ ವರ್ಷಕ್ಕೆ ಪ್ರವೇಶ ಸಿಕ್ಕ ಮಾತ್ರಕ್ಕೆ ಎರಡನೇ ವರ್ಷಕ್ಕೂ ಪ್ರವೇಶ ಸಿಗುತ್ತದೆ ಎಂದು ಪ್ರತಿಪಾದಿಸುವುದಿಲ್ಲ.

16) ಸ್ನಾತಕ / ಸ್ನಾತಕೋತ್ತರ ____________ ಸಾಲಿನ ಪದವಿ ಪರೀಕ್ಷೆ ಮುಗಿದ ಕೂಡಲೇ ಯಾವುದೇ ಪರಿಸ್ಥಿತಿಯಲ್ಲಿ ಕೋಣೆಯನ್ನು ಖಾಲಿ ಮಾಡುತ್ತೇನೆ.

17) ನಾನು ಪ್ರವೇಶ ಪಡೆದ ನಂತರ ನಿಲಯದ ಕೋಣೆಯಲ್ಲಿಯೇ ವಾಸಿಸುತ್ತೇನೆ. ವಿನಾಕಾರಣ ನಿಲಯವನ್ನು ಬಿಟ್ಟು ಬೇರೆ ಕಡೆಗೆ ವಾಸಿಸುವುದಿಲ್ಲ. ಅಕಸ್ಮಾತ 15 ದಿನಗಳಿಗಿಂತ ಹೆಚ್ಚಿಗೆ ಕಾಲ ಹೊರಗೆ ಇರಬೇಕಾದಲ್ಲಿ ತಮ್ಮ ಅನುಮತಿ ತೆಗೆದುಕೊಳ್ಳದೇ ಹೋಗುವುದಿಲ್ಲ. ಒಂದು ವೇಳೆ ಹೋದಲ್ಲಿ ತಾವು ನನ್ನ ಪ್ರವೇಶ ರದ್ದುಪಡಿಸಿ ನನ್ನ ಜಾಗೆಯಲ್ಲಿ ಬೇರೆಯವರಿಗೆ ಪ್ರವೇಶ ನೀಡಬಹುದು ಹಾಗೂ ನನ್ನ ಪ್ರವೇಶಾತಿಯ ಶುಲ್ಕವನ್ನು ಮರುಪಾವತಿಸಲು ವಿನಂತಿಯನ್ನು ಸಲ್ಲಿಸುವುದಿಲ್ಲ.

18) ನಿಲಯದಲ್ಲಿ ವಾಸಿಸುವ ನನ್ನ ಕೋಣೆಯನ್ನು ಸ್ವಚ್ಛವಾಗಿಟ್ಟುಕೊಳ್ಳುವದಲ್ಲದೆ, ಕಾರಿಡಾರದಲ್ಲಿಯೂ ಮತ್ತು ಕೋಣೆಯ ಹೊರಗೆ ಯಾವುದೇ ರೀತಿಯಿಂದ ಕಸ, ಕಡ್ಡಿ, ನೀರು, ಕಾಗದ, ಪ್ಲಾಸ್ಟಿಕ್ ಮುಂತಾದವುಗಳನ್ನು ಚೆಲ್ಲುವದಿಲ್ಲ.

19) ಪ್ರವೇಶ ನೀಡುವಾಗ ತಾವು ನನಗೆ ಒಪ್ಪಿಸಿದ ವಿದ್ಯುತ್ ಬಲ್ಬ ಹಾಗೂ ಸಾಮಾನನ್ನು ನಾನು ಕೋಣೆ ಬಿಡುವವರೆಗೆ ಸುಸ್ಥಿತಿಯಲ್ಲಿಟ್ಟುಕೊಂಡು ಹೋಗುತ್ತೇನೆ. ನಡುವೆ ಬಲ್ಬ್ ಏನಾದರೂ ಸುಟ್ಟಲ್ಲಿ ನಾನೇ ಬಲ್ಬ್ ಹಾಕಿಕೊಳ್ಳುತ್ತೇನೆ.

20) ನಿಲಯದ ಕೋಣೆಯಲ್ಲಿ ನಿಲಯಪಾಲಕರು/ನಿಲಯದ ಅಧಿಕಾರಿಗಳು ತಿಳಿಸಿದ ವಿದ್ಯಾರ್ಥಿಗಳ ಇರುವಿಕೆಯ ಸಂಖ್ಯೆ ಪ್ರಕಾರ ನಾನು ಕೋಣೆಯಲ್ಲಿ ವಾಸಿಸುತ್ತೇನೆ. ಇವರಲ್ಲಿ ಯಾರದರೂ ಬಿಟ್ಟು ಹೋದರೆ ಕೂಡಲೇ ತಮಗೆ ತಿಳಿಸುತ್ತೇನೆ. ಹಾಗೂ ಯಾವದೇ ಪ್ರಸಂಗದಲ್ಲಿ ತಮ್ಮ ಅನುಮತಿಯಿಲ್ಲದೇ ಬೇರೆಯವರಿಗೆ ಇರಲು ಕೊಡುವದಿಲ್ಲ. ಬೇರೆಯವರನ್ನು ಇಟ್ಟುಕೊಂಡಿದ್ದು ತಮಗೆ ಕಂಡುಬಂದಲ್ಲಿ ಅತಿಥಿಯಾಗಿದ್ದ ವಿದ್ಯಾರ್ಥಿಯ ಫೀಯನ್ನು ನಿಲಯದ ನಿಯಮದ ಪ್ರಕಾರ ನಾನೇ ತುಂಬುತ್ತೇನೆ.

21) ಒಂದು ವೇಳೆ ನಾನು ಸ್ನಾತಕ / ಸ್ನಾತಕೋತ್ತರ ಕೋರ್ಸ ಮುಗಿಯುವ ಮೊದಲೇ ಕೋಣೆಯನ್ನು ಬಿಟ್ಟಲ್ಲಿ ಅದನ್ನು ತಮಗೆ ಕೂಡಲೇ ತಿಳಿಸುತ್ತೇನೆ. ಒಂದು ವೇಳೆ ತಿಳಿಸದೇ ಹೋದಲ್ಲಿ ನನ್ನ ಡಿಪಾಜಿಟ್ ಹಣವನ್ನು ಮುಟ್ಟುಗೋಲು ಹಾಕಲು ಒಪ್ಪಿಕೊಂಡಿರುತ್ತೇನೆ.

22) ನಿಲಯದಲ್ಲಿ ಬೆಲೆ ಬಾಳುವಂತಹ ವಸ್ತುಗಳನ್ನು ಅಂದರೆ ಮೊಬೈಲ್, ಲ್ಯಾಪಟಾಪ್, ಕಂಪ್ಯೂಟರ ಹಾಗೂ ಬಂಗಾರ ಬೆಳ್ಳಿ ನನ್ನ ಸ್ವಂತ ಜವಾಬ್ದಾರಿಯ ಮೇಲೆ ಇಟ್ಟುಕೊಳ್ಳುತ್ತೇನೆ. ಆಕಸ್ಮಾತ ಇವು ಕಳೆದು ಹೋದಲ್ಲಿ ನಿಲಯವು ಯಾವುದೇ ರೀತಿಯಿಂದ ಜವಾಬ್ದಾರಿಯನ್ನು ತೆಗೆದುಕೊಳ್ಳುವದಿಲ್ಲ ಹಾಗೂ ಅದಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ವಿಚಾರಣೆಗೆ ನಿಲಯವು ಆಸ್ಪದ ಕೊಡುವದಿಲ್ಲ ಎಂದು ತಿಳಿದಿದ್ದೇನೆ.

ಈ ಮೇಲಿನ ಎಲ್ಲಾ ಷರತ್ತುಗಳನ್ನು ನಾನು ಚಾಚು ತಪ್ಪದೇ ಪಾಲಿಸುತ್ತೇನೆ. ನನ್ನಿಂದ ಕಾನೂನಿನ ಪ್ರಕಾರ ಏನಾದರೂ ತಪ್ಪು ಆದಲ್ಲಿ ಅಥವಾ ತಿಳಿದು ತಿಳಿಯದೇ ನನ್ನಿಂದ ಯಾವುದೇ ಅಪರಾಧ ಆದಲ್ಲಿ ಸ್ವತ: ನಾನು ಹಾಗೂ ಪಾಲಕರ ಸಹಕಾರದೊಂದಿಗೆ ಜವಾಬ್ದಾರಿಯಿಂದ ಬಗೆಹರಿಸಿಕೊಳ್ಳುತ್ತೇನೆ ಅಂತ ಈ ಮೂಲಕ ಸಂತೋಷಪೂರ್ವಕವಾಗಿ ಬರೆದುಕೊಟ್ಟಿರುತ್ತೇನೆ.

ತಮ್ಮ ವಿಶ್ವಾಸದ

**ವಿದ್ಯಾರ್ಥಿಯ ಸಹಿ ಹಾಗೂ ಹೆಸರು**

**ವಿಭಾಗದ ಮುಖ್ಯಸ್ಥರ ಮೂಲಕ ರವಾನಿಸಲಾಗಿದೆ.**

**ವಿಭಾಗದ ಮುಖ್ಯಸ್ಥರು**

ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ, ಕ.ವಿ.ವಿ. ಧಾರವಾಡ ಇವರ ಮುಖಾಂತರ ಕಳಿಸಲಾಗಿದೆ.